ಅರ್ಥವಾಯಿತು. ನಮ್ಮ ಅಳಿಯ ಸೂರಜ್ ಗಣಿತಶಾಸ್ತ್ರದಲ್ಲಿ ಪಿಎಚ್.ಡಿ ಮಾಡುತ್ತಿರುವುದು ಸ್ಟ್ರಾಸ್‌ಬರ್ಗ್‌ನಲ್ಲಿಯೆ. ಆದ್ದರಿಂದ ಆತನಿಂದ ಆ ಯೋಜನೆಯ ಬಗ್ಗೆ ವಿವರ ಪಡೆಯಬಹುದು ಎಂದು ಆಕೆ ಯೋಚಿಸಿದ್ದಳು. ಹಾಗೆಂದೆ ನಾನು ವೀಣಾ ಮುಖ ನೋಡಿದೆ 'ಅರ್ಥವಾಯಿತು' ಎಂಬಂತೆ. ಅದಕ್ಕೆ ಅವಳೂ ತಲೆಯಾಡಿಸಿದಳು. ಲೆಹ್ ತಲುಪಿದ ತಕ್ಷಣ ಸೂರಜ್ ಮತ್ತು ಮಗಳು ಪುಣ್ಯಗೆ ಎಲ್ಲ ವಿವರ ಬರೆದು ಒಂದು ಇ–ಮೇಲ್ ಕಳುಹಿಸಿದೆವು.

★★★

ನಾವು ಬೆಂಗಳೂರಿಗೆ ಹಿಂದಿರುಗಿದ ಮೂರು ದಿನಗಳಲ್ಲಿಯೆ ಸೂರಜ್ ಕಡೆಯಿಂದ ಇ–ಮೇಲ್ ಬಂದಿತ್ತು. ಅದರೊಂದಿಗೆ ಕೆಲವು ಚಿತ್ರಗಳನ್ನು ಮತ್ತು ಒಂದು ಫೈಲನ್ನು ಲಗತ್ತಿಸಲಾಗಿತ್ತು. ಅದನ್ನು ತೆಗೆದು ಓದಿದೆ.

'ಪ್ರೀತಿಯ ಮಾವನವರಿಗೆ,

ಸೂರಜ್‌ನ ನಮಸ್ಕಾರಗಳು.

ಮೂರು ವರ್ಷದಿಂದ ಸ್ಟ್ರಾಸ್‌ಬರ್ಗ್‌ನಲ್ಲಿದ್ದರೂ ಈ ವಿಚಿತ್ರ ಸ್ಥಳದ ಬಗ್ಗೆ ತಿಳಿದಿರಲಿಲ್ಲ. ನಿಮ್ಮ ಪತ್ರ ಓದಿದ ನಂತರ ನಾನು ಮತ್ತು ಪುಣ್ಯ ಆ ಘಟನೆಯ ಬಗ್ಗೆ ಅಂತರ್‌ಜಾಲದಲ್ಲಿ ಜಾಲಾಡಿ ಸ್ಟ್ರಾಸ್‌ಬರ್ಗ್‌ನ ರೀಚ್ ವಿಶ್ವವಿದ್ಯಾಲಯದಲ್ಲಿರುವ ಹಳೆಯ ವೈದ್ಯಕೀಯ ಸಂಸ್ಥೆಯ ವಿಭಾಗಕ್ಕೆ ಹೋಗಿದ್ದೆವು. ಅಲ್ಲಿ ಬಹುಶಃ ಇಡೀ ವಿಜ್ಞಾನದ ಇತಿಹಾಸದಲ್ಲಿಯೇ ಅತ್ಯಂತ ಕ್ರೂರ ಎನ್ನಬಹುದಾದ ಒಂದು ಅಧ್ಯಯನದ ಭಾಗವಾಗಿ 86 ಕಳೇಬರಗಳ ಮರಣೋತ್ತರ ಶಸ್ತ್ರಚಿಕಿತ್ಸೆ ಮಾಡಲೆಂದು ಯೋಜಿಸಲಾಗಿದ್ದ ಪ್ರಯೋಗಶಾಲೆಯನ್ನು ಕಂಡೆವು. ಈ ಅಂಚೆಯ ಜೊತೆಗೆ ನಾನು ಹೇಳಲಿರುವ ಆ ದುರಂತ ಚರಿತ್ರೆಯ ಕೇಂದ್ರಬಿಂದು ಎನ್ನಬಹುದಾದ ಆ ಪ್ರಯೋಗಶಾಲೆಯ ಚಿತ್ರಗಳನ್ನೂ ಲಗತ್ತಿಸಿದ್ದೇನೆ. ಆ ಚಿತ್ರದಲ್ಲಿ ಮಧ್ಯ ಕಾಣುವುದು ಒಂದು ಶಸ್ತ್ರಚಿಕಿತ್ಸೆಯ ಟೇಬಲ್. ಅದರ ಮೇಲೆ ಎಲ್ಲ 86 ಯೆಹೂದಿಗಳ ಕಳೇಬರವನ್ನಿಟ್ಟು ಸುಲಿದು ಅವುಗಳ ಅಸ್ಥಿಪಂಜರ ಮಾಡುವ, ಹಾಗೂ ಇತರೆ ಮಾದರಿಗಳನ್ನು ತಯಾರಿಸುವ ಕಾರ್ಯಾಚರಣೆಗೆ ಸಜ್ಜುಗೊಳಿಸಲಾಗಿತ್ತು. ಇದೆಲ್ಲವೂ ನಡೆದದ್ದು ಎರಡನೇ ಮಹಾಯುದ್ಧದ ಸಮಯದಲ್ಲಿ; ಕ್ರೂರ ನಾಜಿಗಳ ವಿಕೃತ ನಂಬಿಕೆಗಳಿಂದ ಯೆಹೂದಿಗಳನ್ನು ಸಂಪೂರ್ಣವಾಗಿ



ಆಗಸ್ಟ್ ಹಿರ್ಟ್



ಆಗಸ್ಟ್ ಹಿರ್ಟ್‌ನ ಶಸ್ತ್ರಚಿಕಿತ್ಸೆಯ ಪ್ರಯೋಗಶಾಲೆ